ಬೆಂಗಳೂರು ಡಿಸ್ಟ್ರಿಕ್ಟ್.

ನೋಟಿಫಿಕೇಷ್ಯ.

ತಾರೀಖು 30ನೆ ಏಪ್ರೆಲ್ 1909.

ಇದರಿಂದ ಸಮಸ್ತರಿಗೂ ತಿಳಿಯಪಡಿಸುವದೇನಂದರೆ,—ಬೆಂಗಳೂರು ಡಿಸ್ಟ್ರಿಕ್ಟು ದೊಡ್ಡಬಳ್ಳಾಪುರ ತಾಲ್ಲೂಕು ರಾಮದೇವನಹಳ್ಳಿ ಗ್ರಾಮದಲ್ಲಿರುವ ಹಜಾಂ ರಾಮನೆಂಬುವನು ಬುರ್ಡಸಾಬಿ ಹಿತ್ತಲಿನಲ್ಲಿ ಅಗಿಯುತ್ತಿರುವಾಗ ಬಂದು ಸಂಣ ಮಣ್ಣಿನ ಮಗೆಯಲ್ಲಿ ಈ ಕೆಳಗೆ ವಿವರಿಸುವ ಭಂಗಾರದ ಆಭರಣಗಳು ಸಿಕ್ಕಿರುತ್ತವೆಂದು ಸದರಿ ರಾಮನಿಂದ ತಿಳಿಯಲ್ಪಟ್ಟಿರುತ್ತೆ. ಸದರಿ ಆಭರಣಗಳಿಗೆ ಯಾರಾದರೂ ಹಕ್ಕುದಾರರಾಗಿದ್ದಪಕ್ಷದಲ್ಲಿ ಈ ನೋಟಿಫಿಕೇಷ್ಯ ಗೆಜೆಟ್ಟಿನಲ್ಲಿ ಪ್ರಾಯಿಷಾದ ಲಾಗಾಯಿತು ಆರು ತಿಂಗಳೊಳಗೆ ತಮ್ಮ ಹಕ್ಕನ್ನು ದೊಡ್ಡಬಳ್ಳಾಪುರ ಸಬ್ ಡಿವಿಜ್ಞ ಆಫೀಸರವರ ರೂಬು ರೂಬು ತಾವೇ ಆಗಲೀ ಅಥವಾ ಲಾಯರ್ ಮುಖಾಂತ್ರವೇ ಆಗಲಿ ಹಾಜರಾಗಿ ಸ್ಥಿರಪಡಿಸಿಕೊಳ್ಳತಕ್ಕದ್ದು. ಹಾಗೆ ತಪ್ಪಿದ ಪಕ್ಷದಲ್ಲಿ ಮೈಸೂರು ಸೀಮೆಯ "ಟ್ರೆಜರ್‌ಟ್ರವ್" ರೂಲ್ಸ್ 5ನೆ ಸೆಕ್ಷ್ಯ ಅನುಸರಿಸಿ ವಿಲೆ ಮಾಡಲ್ಪಡುತ್ತೆ.

ಭಂಗಾರದ ಆಭರಣಗಳ ವಿವರ.

ಸವರ್ಣ ಬಣ್ಣ ಭಂಗಾರದ ಬೇಡವಾಲಿ ಜೊತೆ 1ಕ್ಕೆ ತೂಕ 1 ವರಹ 3 ಹಣ.
ವರಹಬಂಣ ಭಂಗಾರದ ತಾಳಿಗಳು 7ಕ್ಕೆ ತೂಕ $1\frac{3}{4}$ ವರಹ.
ಕಣಬಂಣ ಭಂಗಾರದ ಗಟ್ಟು 1ಕ್ಕೆ ತೂಕ 1 ವರಹ 11 ತೂಕ.

ಬಿ. ಜೆ. ಕೊಮಾರಸ್ವಾಮಿ ನಾಯಿಕ್, ಡೆಪ್ಯೂಟಿ ಕಮಿಷನರ್.

ಮೈಸೂರು ಡಿಸ್ಟ್ರಿಕ್ಟ್.

1909ನೆ ಇಸವಿ ಏಪ್ರೆಲ್ ತಾರೀಖು 24ನೆ ಶನಿವಾರ ಪ್ರಾತಃಕಾಲ 7—30 ಘಂಟೆಯಲ್ಲಿ ರಂಗಾಚಾರ್ಲುಯವರ ಮೆನೋರಿಯಲ್ ಹಾಲಿನಲ್ಲಿ ನಡೆದ ಮೈಸೂರು ಸಿಟಿ ಮ್ಯುನಿಸಿಪಲ್ ಕೌನ್ಸಿಲರುಗಳ ಆರ್ಡಿನೆರಿ ಮೀಟಿಂಗಿನ ಪ್ರೊಸೀಡಿಂಗ್ಸು.

ಹಾಜರು.

1. ಮಿ॥ ಎಂ. ಕಾಂತರಾಜೇ ಅರಸಿನವರು, (ಪ್ರೆಸಿಡೆಂಟ್).
2. ,, ಎಂ. ಜೆ. ಕೃಷ್ಣಸ್ವಾಮಿರಾಯರವರು, (ವೈಸ್ ಪ್ರೆಸಿಡೆಂಟ್).
3. ,, ಸೈಯದ್ ಯಾಕೂಬ್ ಸಾಹೇಬರವರು, (ಮೈಸೂರು ತಾಲ್ಲೂಕು ಅಮಲ್ದಾರ್).
4. ,, ಎಂ. ವೆಂಕಟಕೃಷ್ಣಯ್ಯನವರು.
5. ,, ಅಂಬಳಿ ಅಂಣಯ್ಯಪಂಡಿತರವರು.
6. ,, ಎಂ. ನರಸುಂಹಸ್ವಾಮಿಗಳವರು.
7. ,, ಎಂ. ಕೃಷ್ಣಪ್ಪಾಜಿ ಅರಸಿನವರು.
8. ,, ಎಸ್. ಶ್ರೀಕಂಠೈಯ್ಯನವರು.
9. ,, ಹಸೇನಲ್ಲಿಬೇಗ್ ಸಾಹೇಬರವರು.
10. ,, ಮಾದಪ್ಪನವರು.
11. ,, ಅನಂತರಾಜೈಯ್ಯನವರು.
12. ,, ರಹಿಮತ್ತುಲ್ಲಾ ಅಹಮ್ಮದ್‌ಸೇಟರವರು.
13. ,, ರೆವರೆಂಡ್ ಹೆಚ್. ಗಲಿಫರ್ಡ್ ಸಾಹೇಬರವರು.
14. ,, ವಿ. ತಿರುವೆಂಗಡ ಮೊದಲಿಯಾರ್‌ವರು.

ಗೈರ್ಹಾಜರು.

1. ಮಿ॥ ಬಿ. ಸುಬ್ಬರಾಯರವರು, (ಮೈಸೂರು ಡಿವಿಜ್ಞ ಎಗ್ಜಿಕ್ಯೂಟಿವ್ ಇಂಜನಿಯರು).
2. ,, ವಿ. ಎಲ್. ಮಾಂಕರ್‌ವರು, (ಮೈಸೂರು ಸಿಟಿ ಹೆಲ್ತ್ ಆಫಿಸರ್).
3. ,, ಕೆ. ಚಂದ್ರಶೇಖರೈಯ್ಯನವರು.
4. ,, ಎಂ. ಸಿ. ರಂಗೈಯ್ಯಂಗಾರ್‌ವರು.
5. ,, ಸೈದ್ ಮೊಹದೀ ಸಾಹೇಬರವರು.
6. ,, ಎ. ಸುಬ್ಬಣ್ಣನವರು.

1909ನೆ ಇಸವಿ ಮಾರ್ಚಿ ಮಾಹೆಯ ಜಮಾ ಖರ್ಚು ಲೆಕ್ಕ ಆಡಿಟರವರ ರಿಪೋರ್ಟು ಮತ್ತು ಇತರ ಜನನ ಮರಣ ವಗೈರೆ ಲೆಕ್ಕಗಳು.

ಪ್ಯಾಸು ಮಾಡಿದೆ.

ಇತಃಪರ ಟರ್ನಹಾಲು ಜಮಾ ಖರ್ಚು ಲೆಕ್ಕವನ್ನು ಮ್ಯುನಿಸಿಪಲ್ ಲೆಕ್ಕದಿಂದ ಪ್ರತ್ಯೇಕಿಸಿ ಇಡತಕ್ಕದ್ದೆಂದು ತೀರ್ಮಾನಿಸಿದೆ.

11. ಮ್ಯಾನೇಜಿಂಗ್ ಕಮಿಟಿ ಪ್ರೊಸೀಡಿಂಗ್ಸು.

ಇಂಜನಿಯರು ಲಕ್ಷ್ಮಣರಾಯರಿಂದ ಖರತಕ್ಕ ಸಾಮಾನುಗಳ ವಿಷಯದಲ್ಲಿ ಮ್ಯಾನೇಜಿಂಗ್ ಕಮಿಟಿಯವರು ಪುನರಾಲೋ

ಚಿಸಿ ಕೇಶವೈಯ್ಯಂಗಾರ್ ಅಥವಾ ಸಾಮಾನನ್ನು ತೆಗೆದುಕ್ಕೊಂಡ ಸ್ಟೋರ್‌ಕೀಪರೇ ಜಬ್ಬಾಸ್ತವಾದ ಸಾಮಾನಿನ ಬೆಲೆಯನ್ನು ಕೊಡತಕ್ಕದ್ದೆಂದು ವಿಧಾಯಕ ಮಾಡತಕ್ಕ ಬಗ್ಗೆ ಕೇಳಬೇಕೆಂದು ತೀರ್ಮಾನಿಸಿದೆ. ಬಾಕಿ ವಿಷಯ ಖಾಯಂ ಮಾಡಿದೆ.

III. ಷಹರಿನಲ್ಲಿ ಹೌಸ್ ಕನೆಕ್ಷನ್‌ಗಳ ಟ್ಯಾಂಪು ಮತ್ತು ಪೈಪು ರಿಪೇರಿ ವಿಷಯದಲ್ಲಿ ಚೀಫ್ ಇಂಜನಿಯರವರಿಂದ ತಲಪಿರತಕ್ಕ 20—3—09ನೆ ಮಕ್ಕಂ 2176ನೆ ನಂಬರ್ ಲೆಟರ್ ಮತ್ತು ನಡವಳಿಕೆ.

ರಿಕಾರ್ಡು ಮಾಡಿದೆ.

ಕೌನ್ಸಿಲ್ಲಿನವರು ಈ ವಿಷಯದಲ್ಲಿ ಹಿಂದೆ ಮಾಡಿರುವ ರಿಜಲ್ಯೂಷ್ಯನ್ ಕಾಪಿಯನ್ನು ಚೀಫ್ ಇಂಜನಿಯರವರಿಗೆ ಕಳುಹಿಸತಕ್ಕದ್ದು.

IV. ಬಲೋದ್ಬಂದಿಯಿಂದ ಕಿಡಿಬು ಹಾಕತಕ್ಕದ್ದನ್ನು ಇನ್ನು ಒಂದು ವರುಷ ಜಾಸ್ತಿಯಾಗಿ ಜಾರೀಲಿ ತರತಕ್ಕ ವಿಷಯದಲ್ಲಿ ಮ್ಯುನಿಸಿಪಲ್ ಕೌನ್ಸಿಲ್ಲಿನವರ ಅಭಿಪ್ರಾಯ ತಿಳಿಸಬೇಕೆಂದು ಸ್ಯಾನಿಟೆರಿ ಕಮಿಷನರವರಿಂದ ತಲಪಿರುವ 20—3—1909ನೆ ಮಕ್ಕಂ 3895-96ನೆ ನಂಬರ್ ಡಾಕೆಟ್.

ಇನ್ನು ಒಂದು ವರುಷ ಬಡಾಯಿಸಬೇಕೆಂದು ಗೌರ್ನಮೆಂಟಿಗೆ ಬರಸುವಂತೆ ಸ್ಯಾನಿಟೆರಿ ಕಮಿಷನರನ್ನು ಕೇಳಿಕೊಳ್ಳತಕ್ಕದ್ದೆಂದು ತಿರ್ಮಾನಿಸಿದೆ.

V. ಗೌರ್ನಮೆಂಟ್ ಹೌಸಿಗೆ ಹೋಗಿ ಬರುವದಕ್ಕಾಗಿ ಇರುವ ರಸ್ತೆಗಳನ್ನು ಮ್ಯುನಿಸಿಪಲ್ ಕೌನ್ಸಿಲ್ಲಿನವರ ಛಾರ್ಜಿಗೆ ತೆಗೆದುಕೊಳ್ಳತಕ್ಕ ವಿಷಯದಲ್ಲಿ ಏನಾದರೂ ಆಕ್ಷೇಪಣೆ ಉಂಟೆ ಎಂದು ಗೌರ್ನಮೆಂಟ್ ಹೌಸ್ ಇಕ್ಟಾರ್ಜ್ ಆಫೀಸರವರಿಂದ ತಲಪಿರುವ 1—4—09ನೆ ಮಕ್ಕಂ 2234—F. 6006-1908—09ನೆ ನಂಬರ್ ಲೆಟರ್.

ಈ ರೋಡುಗಳ ಸಾಲಾಬಾದು ರಿಪೇರಿಯನ್ನು ಕೌನ್ಸಿಲ್ಲಿನವರು ವಹಿಸಿಕೊಳ್ಳಲು ಆಗುವದಿಲ್ಲವೆಂದು ತೀರ್ಮಾನಿಸಿದೆ.

VI. ಮಹಾರಾಜಾಸ್ ಕಾಲೇಜ್ ಪ್ರಿನ್ಸಿಪಲ್ ಮಿ॥ ಜೆ. ವಿಯರ್ ಸಾಹೇಬರವರು ರಾಜೀನಾಮ ಕೊಟ್ಟದ್ದರಿಂದ ಇವರಿಗೆ ಬದಲಾಗಿ ರೆವರೆಂಡ್ ಎಚ್. ಗಲಿಫರ್ಡ್ ಸಾಹೇಬರವರನ್ನು ಮ್ಯುನಿಸಿಪಲ್ ಕೌನ್ಸಿಲರಾಗಿ ನಿಯಮಿಸಿ ಮಾಡಿರುತ್ತೆಂದು ಗೌರ್ನಮೆಂಟಿನಿಂದ ಸಾದರಾಗಿರುವ 27—3—09ನೆ ಮಕ್ಕಂ 9365ನೆ ನಂಬರ್ ನೋಟಿಫಿಕೇಷ್ನ.

ರಿಕಾರ್ಡು ಮಾಡಿದೆ.

VII. ಕರ್ನಾಟಕ ವೈದ್ಯಶಾಲೆಯ ಕಾಂಪೌಂಡರ್ ವಿಶ್ವನಾಥೈಯ್ಯನವರಿಗೆ ಮ್ಯುನಿಸಿಪಲ್ ಕೌನ್ಸಿಲ್ಲಿನವರು ತಿಳಾರಸ್ಸು ಮಾಡಿದ್ದ ಪ್ರಕಾರ 10 ರೂಪಾಯಿನಿಂದ 15 ರೂಪಾಯಿಗೆ ತಲಬು ಇಜಾಫೆ ಮಾಡಲು ಕಾರಣ ಕಾಣಿಸಲಿಲ್ಲವೆಂದು ಗೌರ್ನಮೆಂಟಿನಿಂದ ಸಾದರಾಗಿರುವ 10—4—09ನೆ ಮಕ್ಕಂ 9930—Ml. 383-08-2ನೆ ನಂಬರ್ ಪ್ರೊಸೀಡಿಂಗ್ಸ್.

ರಿಕಾರ್ಡು ಮಾಡಿದೆ.

VIII. ಚಿತ್ರದುರ್ಗ ಮತ್ತು ಹಾಸನ ಡಿಸ್ಟ್ರಿಕ್ಟುಗಳು ವಿನಹ ಬಾಕಿ ಕಡೆಗಳಿಗೆ ಗ್ರೈಂಡ್ ಕಂಪ್ಲಸ್ಟರಿ ಅಲೋಯೆನ್ಸ್ ಯಾನೆ ಮಂಗ್ಯೆ ಭತ್ಯವನ್ನು 1909ನೆ ಮೇ ಆಖೈರು ವರಿಗೆ ಈಗ ಕೊಡುತ್ತಾ ಇರುವ ರೇಟಿನಂತೆಯೇ ಮಂಜೂರ್ಮಾಡಿರುತ್ತೆಂದು ಗೌರ್ನಮೆಂಟಿನಿಂದ ಸಾದರಾಗಿರುವ 10—4—09ನೆ ಮಕ್ಕಂ R. 8320-60—Agl. 31-08—31ನೆ ನಂಬರ್ ಪ್ರೊಸೀಡಿಂಗ್ಸ್.

ರಿಕಾರ್ಡು ಮಾಡಿದೆ.

IX. ಕ್ಷಾಮ ಪೀಡಿತವಾದ ಪ್ರದೇಶಗಳಲ್ಲಿ ನೇಯಿಗೆಯವರಿಗೂ ಮತ್ತು ಇತರ ಕಸಬುದಾರರುಗಳಿಗೂ ಸಹಾಯ ಮಾಡುವದಕ್ಕಾಗಿ ಮಂಜೂರಾಗಿರುವ ಹಣದ ಪೈಕಿ ಯಾವ ಭಾಗವನ್ನಾದರೂ ಸಂಬಂಧಪಟ್ಟ ಮ್ಯುನಿಸಿಪಾಲಿಟಿಗಳಿಗೆ ಸಾಲವಾಗಿ ಯೋಚಿಸಬಹುದೇ ಎಂಬ ವಿಚಾರದಲ್ಲಿ ತಮ್ಮ 30—11—08ನೆ ಮಕ್ಕಂ 59-60ನೆ ನಂಬರ್ ಮೆಮೋಗೆ ಗವುನಕೊಟ್ಟು ಜವಾಬು ಬಿಳಿಸಬೇಕೆಂದು ರೆವಿನ್ಯೂ ಕಮಿಷನರವರಿಂದ ತಲಪಿರುವ 20—4—09ನೆ ಮಕ್ಕಂ 2219—ಡಿ. ನೆ ನಂಬರ್ ಲೆಟರ್.

ಈ ವಿಷಯದಲ್ಲಿ ಯಾವ ವಿಧವಾದ ಜವಾಬ್ದಾರಿಯನ್ನು ಅಂಗೀಕರಿಸುವದಕ್ಕೆ ಮ್ಯುನಿಸಿಪಲ್ ಕೌನ್ಸಿಲ್ಲಿನವರು ಅಸಮರ್ಥರೆಂದು ವ್ಯಸನಪಡುವದಾಗಿ ಗೌರ್ನಮೆಂಟಿಗೆ ತಿಳಿಸಬೇಕೆಂತಲೂ ಮತ್ತು ಈ ವಿಷಯದಲ್ಲಿ ಹಿಂದೆ ನಡೆದಿರುವಂತೆ ಏರ್ಪಾಡು ಮಾಡಿಸಬೇಕೆಂತ ಕೇಳಿಕೊಳ್ಳಬೇಕೆಂತಲೂ ತೀರ್ಮಾನಿಸಿದೆ.

ಎಂ. ಕಾಂತರಾಜೆ ಅರಸ್,
ಪ್ರೆಸಿಡೆಂಟ್.

ಮೈಸೂರು ಸಿಟಿ ಕೌನ್ಸಿಲರ ಆಫೀಸಿಗೆ.

ಆಡಿಟರ್ ರಿಪೋರ್ಟು.

ತಾರೀಖು 23ನೆ ಏಪ್ರೆಲ್ 1909.

1. 22—4—09ರಲ್ಲಿ ಮಾರ್ಚ್ ಮಾಹೆ ಮ್ಯುನಿಸಿಪಲ್ ಲೆಖ್ಖಗಳನ್ನು ನವಚರು ವಗೈರೆ ಆಡಿಟ್ ಮಾಡುವಲ್ಲಿ ಹೆಲ್ತ್ ಆಫೀಸಿನಿಂದ ನಜರುಬಂದು ಮೊಹಲಾ ಮತ್ತು ಚಾವಡಿರಾಜ ಮೊಹಲಾಗಳಲ್ಲಿ ವಸೂಲು ಮಾಡಿದ ಸೆಸ್ ಬಾಬತು ಮೊಬಲಗು ಮೇಲ್ಕಂಡ ವರಿಗೂ ಮ್ಯುನಿಸಿಪಾಲಿಟಿಗೆ ಜಮಾಬಂದು ಇಲ್ಲ. ಇದುವರಿಗೂ ಇರಸಾಲು ಮಾಡದೆ ಇಟ್ಟುಕ್ಕೊಂಡು ಇರಬಹುದು.

2. ಟರ್ನಹಾಲು ಉತ್ಪತ್ತಿ ವಗೈರೆ ಲೆಖ್ಖಗಳನ್ನು ಮಾತ್ರಾ ಹಾಗೆ ಬ್ಯಾರೆ ಇಡತಕ್ಕದ್ದು ಉತ್ತಮ.